ಪದ್ಮಾವತಿ ಅಮ್ಮನವರ ಮೂರ್ತಿಗಳು ವಿರಾಜಮಾನರಾಗಿದ್ದವು. ನೀರಾವರಿ ಇಲ್ಲದೆ ಆಳ ಆಳಕ್ಕೆ ನೀರು ತೆಗೆದು ರಾಗಿ, ಅವರೆಕಾಯಿ, ಜೋಳ ಬೆಳೆಯುತ್ತಿದ್ದ ಆ ಊರಲ್ಲಿ ಜಗಳಗಳೂ ಇದ್ದವು. ಗಂಡಸರು ಜಮೀನಿಗೆ, ನೀರಿಗೆ ಅಂತ ಜಗಳವಾಡಿಕೊಂಡು ಕೋರ್ಟ್ ಕೇಸಲ್ಲಿ ಓಡಾಡುತ್ತಿದ್ದರು. ಹೆಂಗಸರು ಚೆನ್ನಾಗಿದ್ದರೂ ಗಂಡಸರ ಮುಂದೆ ಮಾತನಾಡುವಂತಿರಲಿಲ್ಲ. ಬ್ರಹ್ಮಸೂರಿಯೂ ನಾಲ್ಕೈದು ಕೇಸುಗಳಲ್ಲಿ ಕೋರ್ಟಿಗೆ ಅಲೆದಾಡುತ್ತಿದ್ದ. ಅವನ ಸ್ವಂತ ಅಣ್ಣತಮ್ಮಂದಿರೇ ಹೊಡೆದಾಡಿಕೊಂಡಿದ್ದರು. ಕನಕಮ್ಮ ಮಾತ್ರ ನ್ಯಾಯ ಯಾರ ಪರವಾಗಿದ್ದರೂ ಗಂಡನ ಪರವಾಗಿ ನಿಂತು ಒಳ್ಳೆ ಗೃಹಿಣಿ ಎನಿಸಿಕೊಂಡಿದ್ದಳು. ತನ್ನ ಮಗಳನ್ನು ಮದುವೆ ಮಾಡಿಕೊಟ್ಟು, ಮಗನನ್ನು ಚೆನ್ನಾಗಿ ಓದಿಸಿ, ಈ ಊರಿನ ಸಹವಾಸ ಬೇಡ ಅಂತ ದೂರ ಇಟ್ಟಿದ್ದಳು. ಮೊಮ್ಮಕ್ಕಳನ್ನು ಕಂಡ ಆ ಜೀವಕ್ಕೆ ಮುಂದೆ ನಿಂತು ಮಾಡುವಂತಹ ಜವಾಬ್ದಾರಿಗಳೇನು ಇರಲಿಲ್ಲ.

'ಹನ್ನೆರಡಕ್ಕೆ ರಾಹುಕಾಲ, ಒಂದುವರೆಗೆ ತೆಗೆಯೋಣ... ಇನ್ನು ಯಾರು ಬರಬೇಕು?'

'ಶಿವಮೊಗ್ಗದಿಂದ ಅವರ ತಂಗಿ ಬರಬೇಕು.'

'ಬತ್ತಾರಂತಾ...'

'ಹೂಂ ಬತ್ತಾರಂತೆ. ಅವರ ಮಗನ ಆಫೀಸನವರು ಹೊಂಟವರಂತೆ ಬತ್ತಾವರೆ.'

'ಇಲ್ಲೇನು ಒಂದು ಹೋಟೆಲ್ಲೂ ಇಲ್ವಾ? ನಾನು ತಿಂಡೀನೂ ತಿನ್ನದೆ ಬಸ್ಸ ಹತ್ತಿದೆ.'

'ಅಲ್ಲಿ ಕಾಣಿಸ್ತಾದಲ್ಲಾ... ಆ ಗೂಡಂಗಡಿ ಅಲ್ಲಿ ಟೀ ಕಾಪಿ ಸಿಗ್ತತದೆ ಅಟೇ...'

'ಊರಿನ ಗಂಡಸರು ಹೋಟೆಲ್ಲಿಗೂ ಹೋಗಕಿಲ್ವಾ?' ಕಣ್ಣು ದೊಡ್ಡದು ಮಾಡಿ ಕೇಳಿದ ಒಬ್ಬ.

'ಯಾರಲಾ ತಿಂತಾರಿಲ್ಲಿ? ದುಡಿಯ ಮಕ್ಕಳೆಲ್ಲಾ ಬೆಂಗಳೂರು ಸೇರವೆ. ವರ್ಷಕ್ಕೊಂದ್ಸಲ ಜಾತ್ರೆಗೆ ಬತ್ತಾವೆ. ಇಲ್ಲಿ ಇರೋರು ಹೊಲಕ್ಕೋ ಕೋರ್ಟಿಗೋ ಅಲಿರ್ತಿತ್ತಾರೆ. ಹೋಟಲ್ಲತಕೆ ಯಾರು ಹೋಗಾರು? ಏನೋ ಬೀಡಿನೋ ಜರ್ದಾನೋ ಅಂತ ಹೋಗಿ ಬತ್ತಾರೆ ಅಷ್ಟೆಯಾ.'

'ಇಲ್ಲಿನ ಗಂಡಸರ ನಂಬಿ ಯಾರಾರ ಹೋಟೆಲ್ ಇಟ್ರೆ ಅಷ್ಟೇಯಾ!?' ಲೆಕ್ಕಾಚಾರ ಎಲ್ಲಾ ತಿಳಿವನೊಬ್ಬನ ಉತ್ತರ.

'ನಂಗೋ ಶುಗರು... ಬೇಗ ಹೆಣ ಎತ್ತದೇ ಇದ್ರೆ... ನಾನ್ ಹೆಣ ಆಯ್ತಿನಿ.'

'ಇನ್ನೂ ಹಗರೆ ತನಕ ಹೋಗಿ ಬಸ್ಸ ಹಿಡಿಬೇಕು...' ಮತ್ತೊಬ್ಬನ ಆತಂಕ.

'ಮೊದಲೆಲ್ಲಾ ಹಗರೆಯಿಂದ ದೇವಳ್ಳಿ ತನಕ ನಡಕೊಂಡೆ ಬತ್ತಿದ್ವು, ಜ್ಞಾಪಕ ಐತಾ? ಬೆಳ್ಳಗ್ಗೆ ಒಂದ ಬಸ್ಸು... ಚಂಜಿಗೊಂದು ಬಸ್ಸು...' ಹಳೆಯ ಕಾಲಕ್ಕೆ ಜಾರಿದ ಅವರ ಮಾತನ್ನು ತುಂಡರಿಸಿ,

'ಈಗ್ಲೂ ಹಂಗೆಯಾ... ಆದ್ರೆ ಈ ಆಟೋಗಳು ಬಂದ್ವು ನೋಡು, ಹತ್ತು ರೂಪಾಯಿ ಕೊಟ್ರೆ ಒಬ್ರಂಗೆ ಹತ್ತು ಜನನ್ನ ಕರಕೊಂಡು ಬತ್ತವೆ.'

ಹೀಗೆ ಕನಕಮ್ಮನನ್ನು ಜಗುಲಿಯ ಮೇಲೆ ಮಲಗಿಸಿ ಸುತ್ತ ಮಾತುಗಳು ಬಾವಿಯ ಬಿಂದಿಗೆಗೆ ನೀರು ತುಂಬುವಂತೆ ನಿಧಾನಕ್ಕೆ ತುಂಬುತ್ತಲೇ ಇದ್ದವು. ಆಕೆಯ ಮಗ–ಮಗಳು ಬಂದು ಇಳಿದವರಿಗೆಲ್ಲಾ ತಮ್ಮ ಅಮ್ಮ ಸತ್ತದ್ದು ಹೇಗೆ ಎನ್ನುವುದನ್ನು ಬಿಡಿ ಬಿಡಿಯಾಗಿ ಕತೆಯಂತೆ ಹೇಳುತ್ತಿದ್ದರು. ಕೆಲವರು ಪದೇ ಪದೇ ಕಟ್ಟಿದ್ದ ವಾಚು, ಹಿಡಿದಿದ್ದ ಮೊಬೈಲ್‌ನಲ್ಲಿ ಒಂದುವರೆ ಆಯ್ತಾ ಎಂದು ಕಣ್ಣಾಡಿಸುತ್ತಿದ್ದರು.

'ತಥ್ ಹೆಣ ಇಟ್ಟಕಂಡು ಟೀಮೇ ಸರಿತಿಲ್ಲ... ಸೌದೆ ರೆಡೀನಾ?' ಯಾರದ್ದೋ ಆತಂಕ.

'ಚಟ್ಟಕ್ಕೆ ಬಿದಿರು ತಂದಿದ್ದೀರಾ?' ಮತ್ತೊಬ್ಬರ ಕಳಕಳಿ.

'ಕಟ್ಟಕ್ಕೆ ಶುರುಮಾಡಿ. ಇನ್ನೇನು ಅರ್ಧಗಂಟೆ ಹೆಣ ಎತ್ತಣಾ' – ಈ ಮಾತು ಕಿವಿಗೆ ಬೀಳುತ್ತಲೇ ಶವದ ಸುತ್ತ ಕುಳಿತವರ ಮಧ್ಯೆ ಸಂಚಲನ ಶುರುವಾಯಿತು.

'ನೀನು ಚಡ್ಡಿ ಕಳಚಿ ಪಂಚೆ ಹಾಕ್ಕೊ ಬಾ' ಎಂದೊಬ್ಬರು ಕನಕಮ್ಮನ ಮಗನಿಗೆ ಕ್ರಿಯಾಕರ್ಮ



ಮಾಡಲು ಎಬ್ಬಿಸಿದರು. ಅವನು 'ನಮ್ಮ ಆಫೀಸನವರು ಬರ್ತಿದ್ದಾರೆ ಇರೀ' ಅಂದ. 'ಅವರು ಬತ್ತಾರೆ. ನೀನು ಮೊಖ ತೊಳದು ಪಂಚೆ ಉಟ್ಟಕೊಂಡು ಬಾ ಹೋಗು. ಆಗಲೇ ಹೆಣ ನೋಡು ಮುರುಟಗತಾ ಅದೆ. ನಡಿನಡಿ' ಎಂದು ದಬ್ಬಿದರು.

'ಮುತ್ತೈದೆ... ತವರಿನಿಂದ ಸೀರೆ, ಮಡಲಕ್ಕಿ ಸಾಮಾನು ತಂದಿದ್ದೀರಾ?' ತಕ್ಷಣ ಯಾರೋ ಹೆಣದ ಪಕ್ಕವೇ ಇಟ್ಟಿದ್ದ ಚೀಲಗಳನ್ನು ಕೊಟ್ಟರು.

'ಬಿಳಿ ಬಟ್ಟೆ ಅದಾ?' ಮತ್ತೊಬ್ಬರ ಪ್ರಶ್ನೆ. ಅಲ್ಲೇ ಇದ್ದ ಮಡಿಕೆ, ದಾರ, ಬಿಳಿಬಟ್ಟೆಯನ್ನು ಕೈಗಿತ್ತ ತಕ್ಷಣ, 'ಆಯ್ತಾ ಟೈಮು?' ಮತ್ತೊಮ್ಮೆ ಗಡಿಯಾರ ನೋಡಿಕೊಂಡರು.

'ಬ್ರಹ್ಮಸೂರಿನ ಕರೀರಿ... ಅವನು ಕುಂಕುಮ ಹರಿಶಿನ ಹಚ್ಚಲಿ' ಎಂದರು ಯಾರೋ. ಅದೆಲ್ಲೂ ಕುಳಿತು ಪಕ್ಕದ ಊರಿನವರ ಮುಂದೆ ಕನಕಮ್ಮ ಮಾಡುತ್ತಿದ್ದ ಹುರುಳಿಕಾಳು ಸಾರು, ಸಪ್ಪೆಸರು, ಹುಣಸೇಹಿಂಡಿಯನ್ನು ಮೆಲುಕು ಹಾಕುತ್ತಿದ್ದ ಬ್ರಹ್ಮಸೂರಿಯನ್ನು ಎಬ್ಬಿಸಿದ್ದಾಯ್ತು. 'ಹೂಂ ಆಯ್ತು, ಟೀಮು ತಗಳ್ಳಿ, ಚಟ್ಟದ ಮೇಲೆ ಮಲಗ್ಸಿ' ಅಲ್ಲಿದ್ದ ಹುಡುಗರು ಕೈ ಹಾಕಿದರು. 'ಯಾವ ದಿಕ್ಕು? ಸರೀನಾ?' ಹಿರಿಯರು ಹೇಳಿದ ಕಡೆ ಮಲಗಿಸಿದರು.

'ಆ ಕಾಂತಣ್ಣನ್ನ ಕರೀರಿ... ತೌರಿನಿಂದ ತಂದ ಸೀರೆ ಹಾಕಲಿ...' ಯಾರೋ ಕರೆದರು.

'ತೌರಿನ ಕಡೆಯವರು ಯಾರಾದ್ರೂ ಇದ್ರೆ ಬನ್ನಿ, ಬಾಗಿನ ಇಡಿ...'

'ಇನ್ನಾರು ಇದಾರೆ. ಕಾಂತಣ್ಣನ ಹೆಂಡ್ತಿನೂ ಇಲ್ಲ... ಮಗಳು ಅಮೇರಿಕಾದಲ್ಲಿದೆ.'

'ಅಯ್ಯೋ ಯಾರೋ ಮಾಡ್ರಿ...' ಉಪವಾಸ ಇದ್ದವನ ಆಕ್ರಂದನ.

'ನೀನು ತವರಿನ ಕಡೇನೆ ಅಲ್ವಾ ಬಾರಕ್ಕ...' ಕನಕಮ್ಮನ ತಂಗಿಯನ್ನ ಯಾರೋ ಕರೆದರು.

'ಕೊಟ್ಟ ಹೆಣ್ಣು ಕುಲಕ್ಕೆ ಹೊರಗು ಅಂತೀರಿ... ನಾನೆಂಗೆ ಆದೇನು?' ಎಂದು ಗೋಳಾಡುತ್ತಲೇ ಅಕ್ಕನ ಶವದ ಬಳಿ ಬಂದಳು.

'ಅಯ್ಯೋ ಅದೆಲ್ಲ ಮಾತಿಗೆ, ಬಾ, ಇನ್ಯಾವ್ಯಾಗ... ಇದೇ ಕಡೆ ಸತಿ...' ಸಮಾಧಾನಿಸಿ ಬಾಗಿನವನ್ನು ಕೈಗಿತ್ತರು.

'ಕಾಂತಣ್ಣನ್ನ ಕರೀರಿ...'

'ಇಲ್ಲೇ ಇದ್ದಪ್ಪಾ... ಕಾಣಿಸ್ತಿಲ್ಲ.'

'ಅಲ್ಲಿ ಗೂಡಂಗಡಿ ತವ ನೋಡಿ, ಬೀಡಿ ಸೇದಕ್ಕೆ ಹೋಗಿರಬೇಕು.'

'ಅಲ್ಲೂ ಇಲ್ಲ ಕಣಣ್ಣ...'

'ಅದ್ಯಾವ ಮಾಯದಲ್ಲಿ ಕಾಣೆಯಾದ...'

ಹೀಗೆ ಹುಡುಕುತ್ತಿರುವಾಗಲೇ ಅದ್ಯಾರೋ ಕಾಂತಣ್ಣನನ್ನ ಪತ್ತೆ ಹಚ್ಚಿದ್ದರು. ಮನೆಯ ಹಿಂಭಾಗ ಕೊಟ್ಟಿಗೆಯಲ್ಲಿ ಕಾಂತಣ್ಣ ಚಿತ್ರಾನ್ನಕ್ಕೆ ಕಡಲೇಕಾಯಿ ಒಗ್ಗರಣೆ ಹಾಕುತ್ತಿದ್ದ.

'ಇದ್ಯಾಕಣ್ಣ ಹೆಣ ಇಟ್ಟಕೊಂಡು ಅಡಿಗೆ ಮಾಡ್ತಿದ್ದೀ?' ಆಶ್ಚರ್ಯಚಕಿತನಾಗಿ ಬಂದವ ಪ್ರಶ್ನಿಸಿದ.

'ಅಲ್ಲಿ ತವರ ಮನೆ ಸೀರೆ ಹಾಕಬೇಕಂತೆ ಬಾ...'

'ಅಲ್ಲೇ ಯಾರಿಗಾನಾ ಹಾಕಕ್ಕೆ ಹೇಳು. ಬಂದವರೆಲ್ಲಾ ಹೊಟ್ಟೆಗಿಲ್ಲದೆ ಕುಂತವರೆ. ಈ ದರಿದ್ರ ಊರಾಗೆ ಒಂದು ಹೋಟ್ಲೂ ಇಲ್ಲ. ಇರ ಮನೆಯವರು ಮಾತಾಡಕ್ಕಿಲ್ಲ. ಕೋರ್ಟು ಕೇಸು ಅಂತ ಒಬ್ಬರ ಮೊಕ ಒಬ್ರು ನೋಡಕಿಲ್ಲ. ಅಂತದ್ರಲ್ಲಿ...

ಮೊದಲೆಲ್ಲಾ ಒಲೆ ಹಚ್ಚಕ್ಕೆ ಬಿಡ್ತಿನಿರಲಿಲ್ಲ. ಅಕ್ಕಪಕ್ಕದ ಮನೆಯವರು, ಸಂಬಂಧಿಕ್ರು ಮೂರು ದಿನ ಒಲೆ ಹಚ್ಚದಂಗೆ ನೋಡಕತಾ ಇದ್ರು. ಹೋದವರು ಹೋದ್ರು. ಇದ್ದವರ ಕಡೆ ಗಮನ ಕೊಡಬಾರ್ದ? ನನ್ನ ತಂಗಿ, ಮನೆಗೆ ಯಾರು ಬಂದ್ರೂ ಹೊಟ್ಟೆಗೆ ಹಾಕ್ದೆ ಕಳಿಸಿದವಳಲ್ಲ. ಕಾರ್ಯ ಮಾಡಿ ಮುಗಿಸತನಕ ಮೂರು ಗಂಟೆ ಆಯ್ತದೆ. ಬಂದವರು ಒಂದು ತುತ್ತು ತಿಂದು ಹೋಗಲಿ. ನಾನು ಚಿತ್ರಾನ್ನ, ಟೀ ಎರಡೂ ರೆಡಿ ಮಾಡ್ತೀನಿ. ನೀವು ಮುಗಿಸಿ ಬನ್ನಿ' ಎಂದ ಕಾಂತಣ್ಣ ನಿರುಮ್ಮಳವಾಗಿ ಅಕ್ಕಿಗೆ ಇಟ್ಟ ಎಸರು ಕುದಿಯುತ್ತಿರುವುದನ್ನೇ ಧ್ಯಾನಸ್ಥನಾಗಿ ನೋಡಲಾರಂಭಿಸಿದ.

ಪ್ರತಿಕ್ರಿಯಿಸಿ: **feedback@sudha.co.in**